# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 692 |
| ಸದಸ್ಯರ ಹೆಸರು: | ಶ್ರೀ ಮಧು.ಜಿ.ಮಾದೇಗೌಡ (ಪದವೀಧರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 12.03.2025 |
| ಉತ್ತರಿಸಬೇಕಾದ ಸಚಿವರ ಹೆಸರು: | ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |

********

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮುಜರಾಯಿ ಇಲಾಖೆಗೆ ಸೇರಿರುವ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಕಿರಂಗೂರು ಗ್ರಾಮದ ಶ್ರೀರಾಮ ದೇವಾಲಯದ ಅರ್ಚಕರಲ್ಲದವರಿಗೆ ವರ್ಷಾಸನ ಹಣ ಪಾವತಿ ಮಾಡಿ ಆರ್ಥಿಕ ದುರುಪಯೋಗವೆಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮುಜರಾಯಿ ಇಲಾಖೆಗೆ ಸೇರಿರುವ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಕಿರಂಗೂರು ಗ್ರಾಮದ ಶ್ರೀರಾಮ ದೇವಾಲಯದ ಅರ್ಚಕರಲ್ಲದವರಿಗೆ ವರ್ಷಾಸನ ಹಣ ಪಾವತಿ ಮಾಡಿರುವುದು ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಯಾರು ಯಾರಿಗೆ ಹಣ ಪಾವತಿಸಲಾಗಿದೆ; ಇದರಿಂದ ಸರ್ಕಾರಕ್ಕೆ ಆಗಿರುವ ಆರ್ಥಿಕ ನಷ್ಟ ಎಷ್ಟು; ಎಷ್ಟು ವರ್ಷಗಳಿಂದ ಹಣ ಪಾವತಿಸಿಕೊಂಡು ಬರಲಾಗುತ್ತಿದೆ; (ವರ್ಷವಾರು ಮಾಹಿತಿ ನೀಡುವುದು) | ಮುಜರಾಯಿ ಇಲಾಖೆಗೆ ಸೇರಿರುವ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಕಿರಂಗೂರು ಗ್ರಾಮದ ಶ್ರೀರಾಮ ದೇವಾಲಯದ ಅರ್ಚಕರಲ್ಲದವರಿಗೆ 2003-04ನೇ ಸಾಲಿನಿಂದ 2020ನೇ ಸಾಲಿನವರೆಗೆ ಸುಮಾರು ರೂ.78,798/-ಗಳನ್ನು ಶ್ರೀ ಪದ್ಮನಾಭ ಎಂಬುವವರಿಗೆ ಮತ್ತು 2021ನೇ ಸಾಲಿನಿಂದ 2024ನೇ ಸಾಲಿನವರೆಗೆ ಸುಮಾರು ರೂ.93,000/-ಗಳನ್ನು ಶ್ರೀ ರಾಮಚಂದ್ರ ಎಂಬುವವರಿಗೆ ವರ್ಷಾಸನ ಹಣ ಪಾವತಿ ಮಾಡಿರುವುದು ತಾಲ್ಲೂಕು ಕಛೇರಿಯ ದಾಖಲೆಗಳ ಪರಿಶೀಲನೆಯಿಂದ ಕಂಡು ಬಂದಿರುತ್ತದೆ.<br><br>2024ನೇ ಸಾಲಿನ ನಂತರ ಯಾವುದೇ ವರ್ಷಾಸನ ಹಣ ಪಾವತಿ ಮಾಡಬಾರದು ಎಂದು ತಹಸೀಲ್ದಾರ್ ರವರಿಗೆ ಸೂಚಿಸಿ ವರ್ಷಾಸನ ಹಣ ಪಾವತಿ ಮಾಡುವುದನ್ನು ತಡೆಹಿಡಿಯಲಾಗಿದೆ ಎಂಬುದಾಗಿ ಜಿಲ್ಲಾಧಿಕಾರಿಗಳು ಮಂಡ್ಯ ಜಿಲ್ಲೆ ರವರು ತಿಳಿಸಿರುತ್ತಾರೆ. |
| ಇ) | ಸರ್ಕಾರ ಈ ದೇವಾಲಯಕ್ಕೆ ಕೊನೆಯದಾಗಿ ನೇಮಕ ಮಾಡಿರುವ ಅರ್ಚಕರು ಯಾರು; ಈಗ ಅರ್ಚಕರಾಗಿ ಕೆಲಸ ನಿರ್ವಹಿಸುತ್ತಿರುವವರು ಯಾರು; ಮೂಲ ಅರ್ಚಕರಲ್ಲದವರಿಗೆ ವರ್ಷಾಸನ ಹಣವನ್ನು ಕೆಲವು ವರ್ಷಗಳಿಂದ ಪಾವತಿಸುತ್ತಿರುವುದರಲ್ಲಿ ಅಧಿಕಾರಿ/ ಸಿಬ್ಬಂದಿಗಳ ಪಾತ್ರ ಇದೆಯೇ (ಸಂಪೂರ್ಣ | ತಹಸೀಲ್ದಾರ್, ಶ್ರೀರಂಗಪಟ್ಟಣರವರ ಕಛೇರಿಯ ಅಧಿಕೃತ ಜ್ಞಾಪನ ಸಂ:ಡಿವಿಎಸ್/ ಸಿಆರ್/62/ 1981-82 ದಿನಾಂಕ:31/03/1982 ರಂತೆ ಶ್ರೀ ಕೆ.ವಿ.ರಾಮ ಸ್ವಾಮಿ ಎಂಬುವವರು ಶ್ರೀರಾಮ ದೇವಾಲಯದ ಅರ್ಚಕರಾಗಿರುವುದು ಕಂಡುಬರುತ್ತದೆ.<br><br>ಮೂಲ ಅರ್ಚಕರಲ್ಲದವರಿಗೆ ವರ್ಷಾಸನ ಹಣವನ್ನು ಕೆಲವು ವರ್ಷಗಳಿಂದ ಪಾವತಿಸುತ್ತಿರುವುದರಲ್ಲಿ |

| | | |
|---|---|---|
| | ವಿವರ ನೀಡುವುದು | ಅಧಿಕಾರಿ/ ಸಿಬ್ಬಂದಿಗಳ ಪಾತ್ರದ ಕೂಲಂಕಷವಾದ |
| ಈ) | ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡಿದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಯಾವ ರೀತಿ ಕ್ರಮವಹಿಸಲಿದೆ; ಆರ್ಥಿಕ ನಷ್ಟವನ್ನು ಯಾವ ರೀತಿ ವಸೂಲು ಮಾಡಲಿದೆ ಹಾಗೂ ದೇವಾಲಯಕ್ಕೆ ಅರ್ಚಕರನ್ನು ನೇಮಕ ಮಾಡುವ ಕುರಿತು ಸರ್ಕಾರದ ನಿಲುವೇನು; | ಪರಿಶೀಲನೆಯ ಅಗತ್ಯವಿದ್ದು, ತಹಶೀಲ್ದಾರ್, ಶ್ರೀರಂಗಪಟ್ಟಣ ತಾಲ್ಲೂಕು ರವರಿಂದ ವಿವರವಾದ ಮಾಹಿತಿಯನ್ನು ಪಡೆದು ಸಲ್ಲಿಸಲಾಗುವುದು ಎಂಬುದಾಗಿ ಜಿಲ್ಲಾಧಿಕಾರಿಗಳು ಮಂಡ್ಯ ಜಿಲ್ಲೆ ರವರು ಮಾಹಿತಿ ನೀಡಿರುವುದರಿಂದ ಸದರಿಯವರಿಂದ ವರದಿ ಪಡೆದು ಕಾನೂನು ರೀತಿಯ ಕ್ರಮಕೈಗೊಳ್ಳಲಾಗುತ್ತದೆ.<br><br>ದೇವಾಲಯದ ವಾರಸುದಾರಿಕೆ ವಿಚಾರವಾಗಿ ಶ್ರೀ ಮಹದೇವು ಎಂಬುವವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP No.19530/2021 (GM-R/C) ಮತ್ತು 332/2022 ರೀತ್ಯ ಪ್ರಕರಣ ದಾಖಲಿಸಿದ್ದು, ದಿನಾಂಕ:01/12/2021 ರಿಂದ ತಡೆಯಾಜ್ಞೆ ಚಾಲ್ತಿಯಲ್ಲಿರುತ್ತದೆ. ಪ್ರಕರಣ ಇತ್ಯರ್ಥವಾದ ನಂತರ ಅರ್ಚಕರ ನೇಮಕಾತಿಗೆ ಕ್ರಮವಹಿಸಲಾಗುವುದು. |
| ಉ) | ಈ ದೇವಾಲಯದ ಸ್ಥಿರಾಸ್ತಿ ಮತ್ತು ಚರಾಸ್ತಿ ಸಂರಕ್ಷಣೆಗೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಲಿದೆ; ಹಾಗೂ ಈ ದೇವಾಲಯಕ್ಕೆ ಇವರೆಗೂ ಬಂದಿರುವ ಆದಾಯ ಮತ್ತು ವಿವಿಧ ಬಾಬ್ತುಗಳಿಗೆ ಮಾಡಲಾಗಿರುವ ವೆಚ್ಚ ಎಷ್ಟು; (ವಿವರ ನೀಡುವುದು) | ದೇವಾಲಯವು ಕಿರಂಗೂರು ಗ್ರಾಮಠಾಣೆ ಸೇರಿದ ಅಸೆಸ್ಮೆಂಟ್ ನಂ.385ರಲ್ಲಿ ಇರುತ್ತದೆ. ಕಿರಂಗೂರು ಗ್ರಾಮದ ಸರ್ವೆನಂ. 1088ರಲ್ಲಿ 0.28 ಗುಂಟೆ, ಸರ್ವೆ ನಂ.649ರಲ್ಲಿ 0.07 ಗುಂಟೆ ಮತ್ತು ಸರ್ವೆ ನಂ.653ರಲ್ಲಿ 0.01 ಗುಂಟೆ ಜಮೀನು ದೇವಾಲಯದ ಹೆಸರಿನಲ್ಲಿ ಇರುತ್ತವೆ.<br><br>ಶ್ರೀ ರಾಮಚಂದ್ರ ಮತ್ತು ಇನ್ನಿತರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ WP No. 332/2022(KLR)ರಲ್ಲಿ ದಿನಾಂಕ:23.12.2021ರಂದು ತಹಸೀಲ್ದಾರ್ ಶ್ರೀರಂಗಪಟ್ಟಣ ತಾಲ್ಲೂಕು ರವರು ಹೊರಡಿಸಿರುವ ಜ್ಞಾಪನದಲ್ಲಿ ಕಿರಂಗೂರು ಗ್ರಾಮದ ಶ್ರೀರಾಮಮಂದಿರ ದೇವಸ್ಥಾನಕ್ಕೆ ಸಂಬಂಧಿಸಿದ ಜಮೀನುಗಳನ್ನು ಸರ್ಕಾರದ ವಶಕ್ಕೆ ಪಡೆಯುವ ಬಗ್ಗೆ ಹೊರಡಿಸಿದ್ದು ಸದರಿ ಜ್ಞಾಪನವನ್ನು ಪ್ರಶ್ನಿಸಿ ಪ್ರಕರಣ ದಾಖಲಿಸಿರುತ್ತಾರೆ. ದಿನಾಂಕ:21/12/2023 ರಂದು ಮಾನ್ಯ ಉಚ್ಚನ್ಯಾಯಾಲಯವು ಮಧ್ಯಂತರ ತಡೆಯಾಜ್ಞೆ ನೀಡಿರುತ್ತದೆ. ಪ್ರಕರಣವು ವಿಚಾರಣೆ ಹಂತದಲ್ಲಿದೆ.<br><br>ಶ್ರೀ ಮಹದೇವು ಎಂಬುವವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ WP No.19530/ 2021 (GM-R/C)ರಲ್ಲಿ ದಿನಾಂಕ:29.09.2012 ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ ಕಿಂಗೂರು ಶ್ರೀರಾಮ ದೇವರು ದೇವಸ್ಥಾನವನ್ನು ಅಧಿಸೂಚಿತ ಸಂಸ್ಥೆ ಎಂದು ಘೋಷಿಸಿರುವುದನ್ನು ಪ್ರಶ್ನಿಸಿ ಪ್ರಕರಣ ದಾಖಲಿಸಿರುತ್ತಾರೆ. ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ:01/12/2021 ರಂದು ಮಧ್ಯಂತರ ಆದೇಶ ಹೊರಡಿಸಿ ಸದರಿ ಅಧಿಸೂಚನೆ ಮತ್ತು ಎದುರುದಾರರಾದ ರಾಜ್ಯ ಸರ್ಕಾರ, |

| | | |
|---|---|---|
| | | ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ತಹಸೀಲ್ದಾರ್, ಶ್ರೀರಂಗಪಟ್ಟಣ ತಾಲ್ಲೂಕು ಇವರುಗಳು ಅರ್ಜಿದಾರರು ದೇವಾಲಯದ ನಿತ್ಯ ಕಾರ್ಯ ನಡೆಸುವಲ್ಲಿ ಮಧ್ಯ ಪ್ರವೇಶದಂತೆ ತಡೆಯಾಜ್ಞೆ ನೀಡಿರುತ್ತದೆ.<br><br>ಪ್ರಕರಣ ವಿಚಾರಣೆ ಹಂತದಲ್ಲಿದ್ದು, ಮುಂದಿನ ವಿಚಾರಣೆ ದಿನಾಂಕ:17-03-2025ಕ್ಕೆ ನಿಗದಿ ಆಗಿರುತ್ತದೆ. ನ್ಯಾಯಾಲಯದ ತಡೆಯಾಜ್ಞೆ ತೆರವುಗೊಂಡ ನಂತರವಷ್ಟೆ ದೇವಾಲಯದ ಆದಾಯ ಮತ್ತು ವಿವಿಧ ಬಾಬ್ತುಗಳಿಗೆ ಮಾಡಲಾಗಿರುವ ವೆಚ್ಚಗಳ ಮಾಹಿತಿ ಲಭ್ಯವಾಗಲಿದೆ. |
| ಊ) | ಮಂಡ್ಯ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳಲ್ಲಿ ಆರ್ಥಿಕ ದುರುಪಯೋಗವಾಗುತ್ತಿರುವುದು ಹಾಗೂ ಅರ್ಚಕರಲ್ಲದವರು ಅರ್ಚಕರಾಗಿ ಅಕ್ರಮವಾಗಿ ಸೇವೆ ಸಲ್ಲಿಸುತ್ತಾ, ಸರ್ಕಾರದ ಸವಲತ್ತನ್ನು ಪಡೆಯುತ್ತಿರುವ ಸಾಧ್ಯತೆ ಇರುವುದರಿಂದ ಎಲ್ಲಾ ದೇವಾಲಯಗಳಲ್ಲೂ ತನಿಖೆ ಅಥವಾ ಪರಿಶೀಲನೆಗೆ ಒಳಪಡಿಸಲು ಸರ್ಕಾರ ಕ್ರಮವಹಿಸಲಿದೆಯೇ: (ಮಾಹಿತಿ ನೀಡುವುದು) | ಮಂಡ್ಯ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳಲ್ಲಿ ಆರ್ಥಿಕ ದುರುಪಯೋಗ ವಾಗುತ್ತಿರುವುದು ಹಾಗೂ ಅರ್ಚಕರಲ್ಲದವರು ಅರ್ಚಕರಾಗಿ ಅಕ್ರಮವಾಗಿ ಸೇವೆ ಸಲ್ಲಿಸುತ್ತಾ, ಸರ್ಕಾರದ ಸವಲತ್ತನ್ನು ಪಡೆಯುತ್ತಿರುವ ಪ್ರಕರಣಗಳು ವರದಿಯಾಗಿರುವ ಬಗ್ಗೆ ಪರಿಶೀಲಿಸಿ ಅಂತಹ ಪ್ರಕರಣಗಳು ಕಂಡು ಬಂದಲ್ಲಿ ಸಕ್ಷಮ ಪ್ರಾಧಿಕಾರವು ತನಿಖೆ ಕೈಗೊಂಡು ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಿದೆ. |

ಸಂಖ್ಯೆ: ಕಂಇ 66 ಮುಸಪು 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.